## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ: 162, ಗಿರಿನಗರ, ಬೆಂಗಳೂರು.

### ಜುಲೈ 2022 : ವಾರ್ಡ್ ಸಮಿತಿಯ 2ನೇ ಸಭೆಯ ನಡವಳಿಗಳು

***********

ಉಲ್ಲೇಖ : ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)/ಪಿಆರ್/35/2020–21
ದಿನಾಂಕ: 22–09–2021.

******

ದಿನಾಂಕ : 16–07–2022.
ಸ್ಥಳ : ವಾರ್ಡ್ ಕಛೇರಿ, ಸ್ವಾಮಿ ವಿವೇಕಾನಂದ ಉದ್ಯಾನವನ, ಗಿರಿನಗರ
ಸಮಯ : ಪೂರ್ವಾಹ್ನ 11.00 ಗಂಟೆಗೆ

**ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳ ವಿವರ**

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಶ್ರೀ ಸುನಿಲ್‌ಕುಮಾರ್.ಪಿ | ಮಾನ್ಯ ಮುಖ್ಯ ನಗರ ಯೋಜಕರು ಹಾಗೂ ನೋಡಲ್ ಅಧಿಕಾರಿಗಳು. |
| 2 | ಶ್ರೀ ರಮೇಶ್.ಎಂ | ಸಹಾಯಕ ಅಭಿಯಂತರರು, ಕಾರ್ಯದರ್ಶಿ ಮತ್ತು ಸಂಚಾಲಕರು ವಾರ್ಡ್–162, ಗಿರಿನಗರ. |
| 3 | ಶ್ರೀ ಸತ್ಯಜ್ಯೋತಿ.ಎ.ಡಿ. | ಎಸ್.ಡಬ್ಲ್ಯೂ.ಎಮ್.ಸೂಪರ್‌ವೈಸರ್. |
| 4 | ಶ್ರೀ ಸಂತೋಷ್ | ಎಸ್.ಡಬ್ಲ್ಯೂ.ಎಮ್.ಬಿಬಿಎಂಪಿ. |
| 5 | ಶ್ರೀ ರೇವಣ್ಣ | ಪಿ.ಎಸ್.ಐ.ಟ್ರಾಫೀಕ್ ಬನಶಂಕರಿ. |
| 6 | ಶ್ರೀ ರವಿಚಂದ್ರನ್.ಎಸ್ | ಎನ್,ಡಬ್ಲ್ಯೂ,ಸಿ. ಶ್ರೀವಿದ್ಯಾನಗರ. |

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಯವರ ಅನುಮತಿಯೊಂದಿಗೆ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ಹಾಜರಿದ್ದ ಸದಸ್ಯರೆಲ್ಲರಿಗೂ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

1. ಗಿರಿನಗರ ವಾರ್ಡ್ ವ್ಯಾಪ್ತಿಯಲ್ಲಿ ಇರುವ ಅನವಶ್ಯಕ ಹಾಗೂ Un Scientific ರೋಡ್ ಹಂಪ್ಸ್‌ಗಳನ್ನು ಟ್ರಾಫೀಕ್ ಪೋಲೀಸ್ ರವರ ಸಹಯೋಗದೊಂದಿಗೆ ತೆರವುಗೊಳಿಸಿ ಮುಂದಿನ ಸಭೆಯಲ್ಲಿ ಅದರ ಮಾಹಿತಿಯನ್ನು ಕೊಡುವಂತೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಮಾನ್ಯ ಅಧ್ಯಕ್ಷರು ಸೂಚಿಸಿದರು.

2. ವಾರ್ಡ್ ವ್ಯಾಪ್ತಿಯಲ್ಲಿ ಇರುವ ಸೈನ್ ಬೋರ್ಡ್‌ಗಳ ಮಾಹಿತಿ ಬಗ್ಗೆ ಚರ್ಚಿಸಲಾಯಿತು. ಇದಕ್ಕೆ ಟ್ರಾಫೀಕ್ ಪೋಲೀಸ್ ಇಲಾಖೆಯವರು ಈಗಾಗಲೇ ಅದರ ಮಾಹಿತಿಯನ್ನು ಸಂಬಂಧಪಟ್ಟ Traffic Managenent ಸೆಲ್‌ಗೆ ನೀಡಲಾಗಿದೆ ಎಂಬ ಮಾಹಿತಿಯನ್ನು ಮಾನ್ಯ ಅಧ್ಯಕ್ಷರ ಗಮನಕ್ಕೆ ತರಲಾಗಿರುತ್ತದೆ

3. ವಾರ್ಡ್ ಕಮಿಟಿ ಸಭೆಗೆ ಯಾರ್‍ಯಾರು ಗೈರಾಗಿರುತ್ತಾರೆ ಅಂತಹ ಅಧಿಕಾರಿಗಳಿಗೆ ನೋಟೀಸ್ ನೀಡಬೇಕೆಂದು ಮಾನ್ಯ ಅಧ್ಯಕ್ಷರು ಸೂಚಿಸಿದರು.

4. ವಾರ್ಡ್ ವ್ಯಾಪ್ತಿಯ ಶ್ರೀವಿದ್ಯಾನಗರ ಫಸ್ಟ್ ಕ್ರಾಸ್‌ನಲ್ಲಿ ದಿನ ಬಿಟ್ಟು ದಿನವಾದರೂ ಕಡ್ಡಾಯವಾಗಿ ಒಣಕಸವನ್ನು ತೆಗೆದುಕೊಂಡು ಹೋಗಲು ಸಂಬಂಧಪಟ್ಟ ಅಧಿಕಾರಿಗಳಿಗೆ ಮಾನ್ಯ ಅಧ್ಯಕ್ಷರು ಸೂಚಿಸಿದರು.

5. ವಾರ್ಡ್‌ನಲ್ಲಿ 13 ಕೋವಿಡ್ ಕೇಸ್‌ಗಳು ಬಂದಿದ್ದು ಅದರಲ್ಲಿ 01 ಜನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುತ್ತಾರೆ ಮತ್ತು 12 ಜನ ಹೋಮ್ ಐಸೋಲೇಷನ್‌ನಲ್ಲಿ ಇರುತ್ತಾರೆ ಎಂಬ ಮಾಹಿತಿಯನ್ನು ಮಾನ್ಯ ಅಧ್ಯಕ್ಷರ ಗಮನಕ್ಕೆ ತರಲಾಗಿರುತ್ತದೆ.

6. ಗಿರಿನಗರ ವ್ಯಾಪ್ತಿಯಲ್ಲಿ ಕಾರ್ಬೋವ್ಯಾಕ್ಸಿನ್ ಲಸಿಕೆಯನ್ನು ಶನಿವಾರ, ಕೋವಿಶೀಲ್ಡ್ ಲಸಿಕೆಯನ್ನು ಸೋಮವಾರ, ಬುಧವಾರ, ಶುಕ್ರವಾರ ಮತ್ತು ಕೋವ್ಯಾಕ್ಸಿನ್ ಲಸಿಕೆಯನ್ನು ಮಂಗಳವಾರ ನೀಡಲಾಗುತ್ತಿದೆ ಎಂಬ ಮಾಹಿತಿಯನ್ನು ಸಭೆಯಲ್ಲಿ ತಿಳಿಸಲಾಯಿತು.

7. ಶ್ರೀವಿದ್ಯಾನಗರ ಫಸ್ಟ್ ಕ್ರಾಸ್‌ನಲ್ಲಿ ಇರುವ ಸ್ಯಾನಿಟರಿ ಲೈನ್ ತೊಂದರೆಯನ್ನು ದುರಸ್ತಿಪಡಿಸಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕೆಂದು ಮತ್ತು ಅದರ ವರದಿಯನ್ನು ಮುಂದಿನ ಸಭೆಗೆ ತಿಳಿಸಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಮಾನ್ಯ ಅಧ್ಯಕ್ಷರು ಸೂಚಿಸಿದರು.

8. ಆಟೋ ಟಿಪ್ಪರ್‌ಗಳು ಕಸ ಸಂಗ್ರಹಣೆ ಮಾಡಲು ಹೋದಾಗ ಸ್ಪೀಕರ್‌ಗಳನ್ನು ಹಾಕಲು ಸಾರ್ವಜನಿಕರು ಆಕ್ಷೇಪಿಸಿದರೆ ವಿಶಲ್‌ಗಳ ಮೂಲಕ ಕೂಗಲು ಸೂಚಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾನ್ಯ ಅಧ್ಯಕ್ಷರು ಸೂಚಿಸಿದರು.

9. ವಾರ್ಡ್ ವ್ಯಾಪ್ತಿಯಲ್ಲಿ ಕೆಲಸ ಮಾಡುವ ಪೌರಕಾರ್ಮಿಕರು ಸರಿಯಾದ ಸಮಯಕ್ಕೆ ಬರುತ್ತಿರುವ ಬಗ್ಗೆ ಖಾತರಿ ಪಡಿಸಿಕೊಳ್ಳಲು ಹಾಗೂ ಅವರ ಕೆಲಸದ ಮೇಲೆ ನಿಘಾ ವಹಿಸುವಂತೆ ಸಂಬಂಧಪಟ್ಟ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಮಾನ್ಯ ಅಧ್ಯಕ್ಷರು ಸೂಚಿಸಿದರು.

"ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು".

18/07/2022

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ: 162, ಗಿರಿನಗರ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 162, ಗಿರಿನಗರ

ಪ್ರತಿಯನ್ನು:

1. ಮಾನ್ಯ ಮುಖ್ಯ ಆಯುಕ್ತರು, ಬೃ.ಬೆ.ಮ.ಪಾಲಿಕೆ, ಎನ್. ಆರ್. ವೃತ್ತ ರವರ ಮಾಹಿತಿಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ವಲಯ ಆಯುಕ್ತರು ( ದಕ್ಷಿಣ) ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಆಡಳಿತ) ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಮಾನ್ಯ ವಿಶೇಷ ಆಯುಕ್ತರು (ಆರೋಗ್ಯ & ಘ.ತ್ಯಾ.ನಿ) ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಮುಖ್ಯ ಅಭಿಯಂತರರು (ದಕ್ಷಿಣ) ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಕಾರ್ಯಪಾಲಕ ಅಭಿಯಂತರರು. ಬಸವನಗುಡಿ ರವರ ಮಾಹಿತಿಗಾಗಿ ಕಳುಹಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು. ಬಸವನಗುಡಿ ರವರ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
8. ವಾರ್ಡ್ ಸಮಿತಿ ಸದಸ್ಯರ ಮಾಹಿತಿಗಾಗಿ ಕಳುಹಿಸಿದೆ.
9. ಕಛೇರಿ ಪ್ರತಿ.